**ದಿಃ 24.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಪ್ರಮಾಣೀಕರಿಸಿರುತ್ತಾರೆ.**

**ಮುಖ್ಯ ವಿಚಾರಣೆಃ ಶ್ರೀ.ಎಸ್.ಎಸ್.ಪಿ ವಕೀಲರಿಂದಃ 2 ನೇ ಪ್ರತಿವಾದಿ ಪರವಾಗಿಃ**

**18)** ದಿನಾಂಕಃ 28.07.2008 ನೇ ಇಸ್ವಿಯ ನೊಂದಾಯಿತ ಖರೀದಿ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-4 ಎಂದು ಗುರುತಿಸಲಾಯಿತು. ಸರ್ವೆ ನಂಬರಃ 72/1 ಅ/1 ಈ ಆಸ್ತಿಯ 2023-24 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ನಿ.ಡಿ-5 ಎಂದು ಗುರುತಿಸಲಾಯಿತು. ಸರ್ವೆ ನಂಬರಃ 72/2 ಅ ಈ ಆಸ್ತಿಯ 2023-24 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ನಿ.ಡಿ-6 ಎಂದು ಗುರುತಿಸಲಾಯಿತು. ಸರ್ವೆ ನಂಬರಃ 72/1 ಅ ಈ ಆಸ್ತಿಯ 2023-24 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ನಿ.ಡಿ-7 ಎಂದು ಗುರುತಿಸಲಾಯಿತು. ಸರ್ವೆ ನಂಬರಃ 72/2 ಕ ಈ ಆಸ್ತಿಯ 2023-24 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ನಿ.ಡಿ-8 ಎಂದು ಗುರುತಿಸಲಾಯಿತು. ಸರ್ವೆ ನಂಬರಃ 72/2 ಬ ಈ ಆಸ್ತಿಯ 2023-24 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ನಿ.ಡಿ-9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎ.ಎ.ಕೆ ವಕೀಲರಿಂದಃ ವಾದಿಯ ಪರವಾಗಿಃ**

**19)** ನಾನು ಈ ಪ್ರಕರಣದಲ್ಲಿ ಪ್ರತಿವಾದ ಪತ್ರ ಸಲ್ಲಿಸಲು ವಕೀಲರಿಗೆ ನಾನೇ ಸ್ವತಃ ಮಾಹಿತಿ ಕೊಟ್ಟಿರುತ್ತೇನೆ. ವಾದಿ ಮತ್ತು 1 ನೇ ಪ್ರತಿವಾದಿ ನನಗೆ ಸಂಬಂಧಿಕರಾಗಬೇಕು ಅಂದರೆ ಸರಿ. ನಮ್ಮ ಮನೆತನದವರು 1 ನೇ

ಪ್ರತಿವಾದಿಯವರ ಮನೆಗೆ ಸಂಬಂಧವನ್ನು ಬೆಳೆಸಿರುವದು ಅವರ ಮನೆಯಿಂದ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಂಡಿರುತ್ತೇವೆ ಅಂದರೆ ಸರಿ. ನಾನು ಹುಬ್ಬಳ್ಳಿಯಲ್ಲಿ ಖಾಯ ತರೀಖವಾಗಿ ವಾಸ ಮಾಡಿಕೊಂಡು ಬರುತ್ತಿದ್ದೇನೆ ಅಂದರೆ ಸರಿ. 1 ನೇ ಪ್ರತಿವಾದಿ ಇವರು ವಕ್ಪ ಬೋರ್ಡಿನ ಚೇರಮನ್ ಆಗಿದ್ದರು ಅಂದರೆ ಸರಿ. 1 ನೇ ಪ್ರತಿವಾದಿ ಹಾವೇರಿ ಜಿಲ್ಲೆಯಲ್ಲಿ ಪ್ರತಿಷ್ಟಿತ ವ್ಯಕ್ತಿಯಾಗಿದ್ದ ಅಂದರೆ ಸರಿ.

**20)** 1 ನೇ ಪ್ರತಿವಾದಿ ಹೇಳಿದಂತಹ ಮಾತುಗಳನ್ನು ಮಾತ್ರ ವಾದಿ ಕೇಳುತ್ತಿದ್ದರು ಅಂದರೆ ಆ ಬಗ್ಗೆ ನನಗೆ ಮಾಹಿತಿ ಇರುವದಿಲ್ಲ. ದಿನಾಂಕಃ 14.07.2006 ರಂದು 1 ನೇ ಪ್ರತಿವಾದಿ ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ಪಾಲು ವಾಟ್ನಿ ಮಾಡಿಕೊಂಡಿರುತ್ತಾರೆ. ಆ ರೀತಿ ಪಾಲುವಾಟ್ನಿಯಾದ ಬಗ್ಗೆ ನಮ್ಮ ಕುಟುಂಬದವರು ಸದರಿ ಪಾಲುವಾಟ್ನಿಯಲ್ಲಿ ಹಾಜರಿದ್ದರು, ನಾನು ಪಾಲುವಾಟ್ನಿಯಾದ ದಾಖಲಾತಿಯನ್ನು ಸ್ವತಃ ನೋಡಿರುತ್ತೇನೆ. ಸದರಿ ಪಾಲುವಾಟ್ನಿಯಲ್ಲಿ ವಾದಿಯಾದಂತಹ ಅಬ್ದುಲ್‌ವಹಾಬ ಇವರಿಗೆ ಎಷ್ಟು ಕ್ಷೇತ್ರದ ಆಸ್ತಿ ಬಂದಿತ್ತು ಎಂದು ನನಗೆ ಹೇಳಲು ಬರುವದಿಲ್ಲ. ನನಗೆ ದಾವಾ ಆಸ್ತಿಯ ಸರ್ವೆ ನಂಬರಃ 72 ಎಂದು ಮಾತ್ರ ಗೊತ್ತಿರುತ್ತದೆ. ಆದರೆ ಸದರಿ ಆಸ್ತಿಯ ಹಿಸ್ಸೇಗಳ ಬಗ್ಗೆ ನನಗೆ ಮಾಹಿತಿ ಇರುವದಿಲ್ಲ, ಅದೇ ರೀತಿ ಸದರಿ ಆಸ್ತಿಯ ಕ್ಷೇತ್ರ ಎಷ್ಟು ಇರುತ್ತದೆ ಎಂದು ನನಗೆ ಹೇಳಲು ಬರುವದಿಲ್ಲ. ದಾವಾ ಆಸ್ತಿ ನನ್ನ ಕಬ್ಜೆಯಲ್ಲಿ ಇಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪಾಲುವಾಟ್ನಿಯಾದಾಗ ವಾದಿ ಮತ್ತು 1 ನೇ ಪ್ರತಿವಾದಿ ಕುಟುಂಬದ ನಡುವೆ ವೈಮನಸ್ಸು ಉಂಟಾಗಿರುತ್ತದೆ ಅಂದರೆ ಸರಿ. ಆ ರೀತಿ ವೈಮನಸ್ಸು ಉಂಟಾದ ಬಗ್ಗೆ ನಾನು ದಾವಾ ಆಸ್ತಿಯನ್ನು ಖರೀದಿ ಹಿಡಿಯುವ ಮೊದಲು ನನಗೆ ಗೊತ್ತಿರಲಿಲ್ಲ.

21) ಆ ರೀತಿ ವಾದಿ ಮತ್ತು 1 ನೇ ಪ್ರತಿವಾದಿಯ ಕುಟುಂಬದ ನಡುವೆ ನಾನು ದಾವಾ ಆಸ್ತಿಯನ್ನು ಖರೀದಿ ಹಿಡಿಯುವ ಪೂರ್ವದಲ್ಲಿ ವೈಮನಸ್ಸು ಇದ್ದ ಬಗ್ಗೆ ವಿಚಾರಣೆ ಮಾಡಿದ್ದೇನೆ. ಆ ರೀತಿ ವೈಮನಸ್ಸು ಇದ್ದ ಕುರಿತಾಗಿ ನಾನು ದಾವಾ ಆಸ್ತಿಯನ್ನು ಖರೀದಿ ಹಿಡಿಯುವ ಪೂರ್ವದಲ್ಲಿ ಯಾವುದೇ ದಿನಪತ್ರಿಕೆಯಲ್ಲಿ ಪ್ರಕಟಣೆ ಕೊಟ್ಟಿಲ್ಲ ಅಂದರೆ ಸರಿ. ನಾನು ದಾವಾ ಆಸ್ತಿಯನ್ನು ರೂ.6,00,000/- ಗಳಿಗೆ ಖರೀದಿಗೆ ತೆಗೆದುಕೊಂಡಿದ್ದೇನೆ. ನಾನು ಖರೀದಿ ಪತ್ರದಲ್ಲಿ ದಾವಾ ಆಸ್ತಿಯ ಒಟ್ಟು ಮೌಲ್ಯ ರೂ.11,35,000/- ಗಳಷ್ಟು ಕಾಣಿಸಿದ್ದೇನೆ. ಖರೀದಿ ಪತ್ರದಲ್ಲಿ ದಾವಾ ಆಸ್ತಿಯ ಮೌಲ್ಯವನ್ನು ನಾನು ರೂ.13,35,000/- ಎಂದು ತೋರಿಸಿರುತ್ತೇನೆ ಅಂದರೆ ಸರಿ. ನಾನು ಖರೀದಿ ಪತ್ರ ಮಾಡಿಕೊಳ್ಳುವಾಗ 1 ನೇ ಪ್ರತಿವಾದಿಗೆ ರೂ.6,00,000/- ರೋಖ ತರೀಖವಾಗಿ ಖರೀದಿ ಹಣವನ್ನು ಕೊಟ್ಟಿದ್ದೇನೆ. ನಾನು ಬಹಳ ದಿವಸದಿಂದ ಆದಾಯ ತೆರಿಗೆಯನ್ನು ಕಟ್ಟುತ್ತಾ ಬರುತ್ತೇನೆ ಅಂದರೆ ಸರಿ.

22) ಆದಾಯ ತೆರಿಗೆ ಕಟ್ಟುವಂತಹ ವ್ಯಕ್ತಿಗಳಿಗೆ ರೂ.3,00,000/- ಗಳಿಗಿಂತ ಹೆಚ್ಚಿಗೆ ವ್ಯವಹಾರ ಮಾಡಿದರೆ ಹಣವನ್ನು ಚೆಕ್ ಮೂಲಕ ಕೊಡಬೇಕು ಎನ್ನುವ ಷರತ್ತು ಸರ್ಕಾರದಿಂದ ಕಡ್ಡಾಯ ಇತ್ತು ಅಂದರೆ ಸರಿಯಲ್ಲ , ಏಕೆಂದರೆ ನಾನು ದಾವಾ ಆಸ್ತಿಯನ್ನು ಖರೀದಿ ಹಿಡಿಯುವಾಗ ಸದರಿ ಕಡ್ಡಾಯ ಷರತ್ತು ಇರಲಿಲ್ಲ, ಆದರೆ ಈಗ ಅದು ಆಗಿರುತ್ತದೆ. ನಾನು ದಾವಾ ಆಸ್ತಿಯನ್ನು ಖರೀದಿಗೆ ತೆಗೆದುಕೊಳ್ಳುವಾಗ ರೂ.6,00,000/- ಹಣದ ಕುರಿತಾಗಿ ಆದಾಯ ತೆರಿಗೆ ಕಟ್ಟುವಾಗ ಆ ಕುರಿತಾಗಿ ನನ್ನ ಆದಾಯ ತೆರಿಗೆ ಕಟ್ಟುವ ದಾಖಲಾತಿಯಲ್ಲಿ ತೋರಿಸಿರುವದಿಲ್ಲ. ನಾನು 1 ನೇ ಪ್ರತಿವಾದಿಗೆ ಯಾವುದೇ ರೀತಿ ಖರೀದಿ ಹಣವನ್ನು ಕೊಟ್ಟಿರುವದಿಲ್ಲ ಮತ್ತು ನಾನು ಖೊಟ್ಟಿಯಾಗಿ 1 ನೇ ಪ್ರತಿವಾದಿಯಿಂದ ಖೊಟ್ಟ ಖರೀದಿ ಪತ್ರವನ್ನು ಬರೆಯಿಸಿಕೊಂಡಿದ್ದೇನೆ ಅಂದರೆ

ಸರಿಯಲ್ಲ. ನಾನು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ, ಹಾವೇರಿ.